# ಆಹಾ ಸುದ್ದಿ!

★ ಸಸಿತೋಟ



ಅಮೆರಿಕಾದ ನೆವಾಡಾದಲ್ಲಿ ಜರುಗಿದ ಸ್ಪರ್ಧೆಯಲ್ಲಿ ವರ್ಜೀನಿಯ 'ಹೆಚ್ಚು ಗಡ್ಡಧಾರಿಗಳ ನಗರ'ವಾಗಿ ಹೊರಹೊಮ್ಮಿದೆ. ಮುಖದ ಮೇಲೆ ಕಳೆ ಬೆಳೆಸಿಕೊಂಡ 57 ಮಂದಿಯನ್ನು ವರ್ಜೀನಿಯ ಪೆರೇಡ್‌ನಲ್ಲಿ ನಡೆಸಿದರೆ, ಕಾರ್ಸನ್ ನಗರ 46 ಮಂದಿಯ ಗಡ್ಡವನ್ನು ಪ್ರದರ್ಶಿಸಿತಂತೆ.

ಹೆರೆದು ಹಾಕಿದ ಗಡ್ಡದ ಗುಡ್ಡ ಬೀದಿ ಬದಿ ಬೀಳುವ ಬದಲು ಮುಖದ ಮೇಲೆ ಉಳಿದುಕೊಂಡಿದ್ದರಿಂದ ಅಲ್ಲಿ ಕಸದ ಸಮಸ್ಯೆ ಕಡಿಮೆ ಇರಬಹುದೇನೊ?

ಅಮೆರಿಕಾ ಅಧ್ಯಕ್ಷರಾಗಿ ಒಬಾಮ ಮರು ಆಯ್ಕೆಗೊಂಡಿದ್ದು ಹಳೆಯ ಸುದ್ದಿ. ಚುನಾವಣೆಯಲ್ಲಿ ಮತದಾನ ಮಾಡದ ಗಂಡನನ್ನು ಅರಿಝೋನಾ ಮಹಿಳೆ ಹಾಲಿ ಸೊಲೊಮನ್ ಕಾರಿನಲ್ಲಿ ಅಟ್ಟಾಡಿಸಿ ಢಿಕ್ಕಿ ಹೊಡೆಸಿ ಗಾಯಗೊಳಿಸಿದ್ದು ಹೊಸ ಸುದ್ದಿ.

ಭಾರತದಲ್ಲಿ ಮತ 'ದಾನ'ಕ್ಕೆ ಹೋಗದೆ ಟಿವಿ ನೋಡುತ್ತ ರಜೆ ಸದುಪಯೋಗ ಮಾಡಿಕೊಳ್ಳುವ ಗಂಡಂದಿರಿಗೆ ಅವರವರ ಪತ್ನಿಯರು ಕಾರಿನಲ್ಲಿ ಬೇಡ, ಲಟ್ಟಣಿಗೆಯಲ್ಲಿ ಇಕ್ಕಿದರೂ ಸಾಕು, ಶೇಕಡಾ ನೂರರಷ್ಟು ಮತದಾನ ಎಂದು ಘೋಷಿಸಿಕೊಳ್ಳಬಹುದು.

ನಿತ್ಯ ಇ-ಮೇಲ್ ಮಾಡುವಾಗ, ವರದಿಗಳನ್ನು ಫೈಲ್ ಮಾಡುವಾಗ ಅದೇ ಕೀ ಬೋರ್ಡ್ ಮೇಲೆ ಕುಟ್ಟಿ ಕುಟ್ಟಿ ಬೇಸರ ಬಂದಿದೆಯಾ? ಬೇಸರ ಕಳೆಯಲು ಹೀರುವ ಬಿಯರ್ ಕ್ಯಾನ್‌ಗಳನ್ನೇ ಕೀ ಬದಲು ಜೋಡಿಸಿದರೆ...! ರೊಮಾನಿಯಾದ ರೋಬೊಫನ್ ಕ್ರಿಯೇಟ್ ಕಂಪೆನಿ ಒಟ್ಟು 44 ಬಿಯರ್ ಕ್ಯಾನ್‌ಗಳನ್ನು ಕಂಪ್ಯೂಟರ್ ಕೀ ಬದಲು ಜೋಡಿಸಿ ಕಂಪ್ಯೂಟರ್‌ಗೆ ಸಂಪರ್ಕ ಕಲ್ಪಿಸಿದೆ.

ಸದ್ಯಕ್ಕಂತೂ ಅವು ಖಾಲಿ ಕ್ಯಾನ್‌ಗಳು. ತುಂಬಿದ ಕ್ಯಾನ್‌ಗಳನ್ನು ಅಳವಡಿಸಿದರೆ 'ಟೂ ಇನ್ ಒನ್' ಕೆಲಸ ಒಟ್ಟೊಟ್ಟಿಗೇ ಮಾಡಬಹುದು.



ದ.ಆಫ್ರಿಕಾದ ನಾಲ್ವರು ಹುಡುಗಿಯರು ಮಾನವ ಮೂತ್ರದಿಂದ ವಿದ್ಯುತ್ ಉತ್ಪಾದಿಸಿದ್ದಾರಂತೆ. ಒಂದು ಲೀಟರ್ ಮೂತ್ರದಿಂದ 6 ತಾಸು ವಿದ್ಯುತ್ ಉತ್ಪಾದಿಸಬಹುದಂತೆ.

ನಮ್ಮ ಪಾದಚಾರಿ ಮಾರ್ಗಗಳಲ್ಲಿ, ಕಾಂಪೌಂಡ್ ಗೋಡೆಗಳ ಮೇಲೆ ಎಷ್ಟೊಂದು ವಿದ್ಯುತ್ ಪೋಲಾಗುತ್ತಿದೆ!

ಕ್ಯಾಲಿಫೋರ್ನಿಯಾದ ಸ್ಯಾನ್ ಡಿಯಾಗೊ ಮೃಗಾಲಯದ ಈ 55 ವರ್ಷ ವಯಸ್ಸಿನ ಗೊರಿಲ್ಲಾ 'ವಿಲಾ' ಗೊರಿಲ್ಲಾಗಳಲ್ಲೆ ಜಗತ್ತಿನ ಮೂರನೇ 'ಹಿರಿಯಜ್ಜಿ' . ಮರಿ ಗೊರಿಲ್ಲಾಗಳಿಗೆ 'ಕೂಸು ಮರಿ' ಮಾಡುವ ಈ ವಿಲಾ ಅಜ್ಜಿಯನ್ನು ನೋಡಿ ಭೇಟಿ ನೀಡಿದವರೆಲ್ಲಾ 'ಅಲಲಾ' ಎಂದರಂತೆ. ಈ ಮೃಗಾಲಯದಲ್ಲಿ ಮರಿ ಗೊರಿಲ್ಲಾಗಳಿಗೆ ಬಾಡಿಗೆ ತಾಯಿ, ಅಜ್ಜಿಯಾಗಿ ಕೆಲಸ ನಿರ್ವಹಿಸಿದ ಉದ್ದನೆಯ ಸಾಧನೆ ಪಟ್ಟಿಯೇ ಈಕೆಯ ಬಯೋಡೇಟಾದಲ್ಲಿದೆ. ಮನೆಯಲ್ಲಿ ಅಜ್ಜಿ ಇದ್ದಿದ್ದರೆ.. ಎಂದು ಈಗಿನ ವಿಭಕ್ತ ಕುಟುಂಬಗಳ ಮಕ್ಕಳು ಅಸೂಯೆಪಡುವಂತೆ ಮಾಡಿದೆ ಈ ವಿಲಾ.





'ಕತ್ತೆ' ಎಂದು ಬಯ್ಯಿಸಿಕೊಳ್ಳುವವರಿಗೊಂದು ಶುಭ ಸುದ್ದಿ. ಸೆರ್ಬಿಯಾದ ರಕ್ಷಿತ ಕತ್ತೆಧಾಮದಲ್ಲಿ ಕತ್ತೆ ಹಾಲಿನಿಂದ ತಯಾರಿಸುವ ಚೀಸ್ ವಿಶ್ವದಲ್ಲೇ ಅತ್ಯಂತ ದುಬಾರಿ ಚೀಸ್ ಅಂತೆ. ಬೆಲೆ ಕೆಜಿಗೆ 1272 ಡಾಲರ್ (ಸುಮಾರು 88 ಸಾವಿರ ರೂಪಾಯಿ). ಕತ್ತೆ ಹಾಲಿನ ಬಣ್ಣನೆಯಂತೂ ಕೇಳುವುದೇ ಬೇಡ. ಈಜಿಪ್ಟ್‌ನ ಸುಂದರಿ ಕ್ಲಿಯೋಪಾತ್ರ ಸೌಂದರ್ಯಕ್ಕೆ ಕತ್ತೆ ಹಾಲಿನ ಸ್ನಾನವೇ ಕಾರಣ ಎನ್ನುತ್ತದೆ ಇತಿಹಾಸ. ಸೌಂದರ್ಯ ಸ್ಪರ್ಧೆಗಳ ಹಿಂದೆ ಓಡುವ ಈ 'ಮಿಸ್'ಗಳಿಂದಾಗಿ ಕತ್ತೆಗೂ ಒಂದು ಕಾಲ ಬಂದಂತಾಯ್ತು.